

ಸ್ಕರ್ಟ್, ಫ್ರಾಕ್... ಹೀಗೆ ಯಾವ ರೂಪದಲ್ಲಾದರೂ ಹೊಲಿಸಿಕೊಂಡು ತೊಟ್ಟುಕೊಳ್ಳಬಹುದು, ಇಂದಿನ ಟ್ರೆಂಡ್‌ಗೆ ತಕ್ಕ ಹಾಗೆ ಬದಲಾಯಿಸಿಕೊಳ್ಳಬಹುದು.

ಹಿಂದೆ ಎಲ್ಲ ಅಮ್ಮನ ಸೀರೆ ಹಳತಾದಾಗ ಮಗಳಿಗೆ ಉದ್ದ ಲಂಗ, ರವಿಕೆ ಹೊಲಿಸುತ್ತಿದ್ದರು. ಅದನ್ನು ಧರಿಸಿ ಮಗಳು ಮನೆತುಂಬ ಓಡಾಡಿದಾಗ ಅಮ್ಮನ ಮುಖದಲ್ಲೂ ಸಂಭ್ರಮ, ಮಗಳ ಮುಖದಲ್ಲೂ ಖುಷಿಯ ಛಾಯೆ, ಅಭಿಮಾನದ ಝಲಕ್!

ಅನೇಕ ಸಲ ಅಮ್ಮ ಕೊಟ್ಟ ರೇಷ್ಮೆ ಸೀರೆಯನ್ನು ಹೆಮ್ಮೆಯಿಂದ ಮಡಿಚಿ ವಾರ್ಡ್‌ರೋಬ್‌ನಲ್ಲಿ ಜತನವಾಗಿ ಕಾಪಾಡಿಕೊಂಡಿರುತ್ತೇವೆ. ತುಂಬ ವರ್ಷ ಹಾಗೇ ಇಟ್ಟು ಇಟ್ಟು ಅದರ ಮಡಿಕೆಯಲ್ಲೇ ಹರಿದುಹೋಗಿರುವುದು ಗೊತ್ತೇ ಆಗಿರುವುದಿಲ್ಲ. ಇಂತಹ ಸೀರೆಗಳನ್ನು ಉಪಯೋಗಕ್ಕೆ ಯೋಗ್ಯವಿಲ್ಲ ಎಂದು ಭಾವಿಸುವ ಬದಲಿಗೆ ಇದರಲ್ಲೇ ನಮಗೆ ಸರಿಹೊಂದುವ ಉಡುಪು ಹೊಲಿಸಿಕೊಳ್ಳಬಹುದು.

ಇನ್ನೂ ಕೆಲವು ಸಂದರ್ಭಗಳಲ್ಲಿ ಸೀರೆ ಯಾವುದಾದರೂ ಚೂಪಿನ ವಸ್ತುಗಳಿಗೆ ಸಿಕ್ಕಿ ಅಂಚು ಹರಿದುಹೋಗುತ್ತದೆ, ಇಸ್ತ್ರಿ ಮಾಡುವಾಗ ಬಿಸಿ ಹೆಚ್ಚಾಗಿ ಸುಟ್ಟುಹೋಗುತ್ತದೆ. ಇಂಥ ಸೀರೆಗಳಿಗೆ ಪ್ಯಾಚ್‌ವರ್ಕ್ ಅಥವಾ ಡಾರ್ನಿಂಗ್ ಮಾಡಿಸಿದರೂ ಅದರ ಬಾಳಿಕೆ ಹೆಚ್ಚು ದಿನ ಇರುವುದಿಲ್ಲ. ಈ ಸೀರೆಗಳನ್ನು ಮೂಲೆಗೆ ಹಾಕುವ ಬದಲಿಗೆ ಲೆಹೆಂಗಾ, ಲಾಂಗ್‌ಸ್ಕರ್ಟ್, ಡಿಸೈನರ್ ಟಾಪ್... ಹೀಗೆ ಯಾವುದಾದರು ಒಂದನ್ನು ಹೊಲಿಸಿಕೊಂಡರೆ ಅದು ಫ್ಯಾಷನ್‌ಟ್ರೆಂಡ್ ಅನುಸರಿಸಿದಂತೆಯೂ ಆಗುತ್ತದೆ..

### ಸೀರೆಯಿಂದ ಫುಲ್ ಮ್ಯಾಕ್ಸಿ

ಫುಲ್ ಮ್ಯಾಕ್ಸಿ ಪುಟಾಣಿ ಹುಡುಗಿಯರಿಗೆ ಮಾತ್ರ ಸೂಕ್ತ ಎಂಬ ಮಾತು ಹಿಂದೆ ಇತ್ತು. ಆದರೆ ಈಗ ಎಲ್ಲ ವಯೋಮಾನದವರೂ ಫುಲ್ ಮ್ಯಾಕ್ಸಿ ಧರಿಸಿಕೊಳ್ಳುತ್ತಾರೆ. ಯಾವ ಸೀರೆಯಿಂದ ಯಾವ ಉಡುಪು ತಯಾರಿಸಿಕೊಳ್ಳಬಹುದು ಎಂಬ ಬಗ್ಗೆ ಯೋಜನೆ ಹಾಕಿಕೊಂಡು ಅದಕ್ಕೆ ತಕ್ಕಂತೆ ಸೀರೆಯನ್ನು ಬಳಸಿಕೊಳ್ಳಬೇಕು. ದುಬಾರಿ ಸೀರೆಗಳಾದ ಬನಾರಸ್, ಕಾಂಜೀವರಂ, ಟಸ್ಸಾರ್, ಚಂದೇರಿ, ಸಾಫ್ಟ್ ಸಿಲ್ಕ್‌ನಂತಹ ಸೀರೆಗಳಿಂದ ಫುಲ್ ಮ್ಯಾಕ್ಸಿ ಹೊಲಿಸಿಕೊಂಡರೆ ಪ್ಲೆಸೆಂಟ್ ಲುಕ್ ಪಡೆಯಬಹುದು. ಅಲ್ಲದೆ ಇಂತಹ ಸೀರೆಗಳು ಲೆಹೆಂಗಾ, ಲಾಂಗ್ ಸ್ಕರ್ಟ್, ಡಿಸೈನರ್ ಟಾಪ್‌ಗಳಿಗೂ ಸೂಕ್ತ ಎನಿಸುತ್ತವೆ.

ಇನ್ನು ಕಾಟನ್ ಸಿಲ್ಕ್, ಖಾದಿ ಸಿಲ್ಕ್, ಜೂಟ್ ಸಿಲ್ಕ್, ಡೆನಿಮ್, ರಾ ಸಿಲ್ಕ್‌ನಂತಹ ಬಟ್ಟೆಗಳು ಟ್ರೆಂಡಿಯಾಗಿರುವ ಉದ್ದ ಲಂಗಕ್ಕೆ ಸರಿ ಹೊಂದುತ್ತವೆ. ಇದಕ್ಕೆ ಕಾಂಟ್ರಾಸ್ಟ್ ಬಣ್ಣದ ಬಣ್ಣದ ಟಾಪ್ ಸಿದ್ಧಪಡಿಸಿಕೊಂಡರೆ ಸಖತ್ ಲುಕ್ ಇರುತ್ತದೆ. ಶಿಫಾನ್, ಜಾರ್ಜೆಟ್ ಸೀರೆಗಳಿದ್ದರೆ ಅವುಗಳಿಂದ ಮ್ಯಾಕ್ಸಿ, ಕಫ್ತಾನ್, ಹಾಫ್ ಸೀರೆ ಹೊಲಿಸಿಕೊಳ್ಳಬಹುದು.

‘ಹಳೆ ಸೀರೆ ಇರಲಿ, ಡ್ಯಾಮೇಜ್ ಆದ ಸೀರೆಗಳೇ ಇರಲಿ, ನಾವೀನ್ಯವಾಗಿ ಹೊಲಿಸಿಕೊಂಡರೆ ಫ್ಯಾಷನಬಲ್ ಆಗಿಯೇ ಕಾಣಬಹುದು. ಇದಕ್ಕೆ ಬೇಕಿದ್ದರೆ ಬ್ರೊಕೇಡ್, ಲೇಸ್ ವರ್ಕ್, ಚಿಮ್ಕಿ ಮುಂತಾದ ಆ್ಯಸೆಸರೀಸ್ ಸೇರಿಸಿಕೊಂಡರೆ ಫಂಕ್ಷನ್ ವೇರ್ ಆಗಿಯೂ ಬಳಸಿಕೊಳ್ಳಬಹುದು’ ಎಂದು ಸಲಹೆ ನೀಡುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಫ್ಯಾಷನ್ ಡಿಸೈನರ್ ಸ್ನೇಹಾ ಶೆಟ್ಟಿ.

‘ಸ್ಲಿಮ್ ಆಗಿರುವವರು ಸಿಂಥೆಟಿಕ್ ಸೀರೆಗಳಿಂದ ಮಾಡಿದ ಉಡುಪು ಧರಿಸಿಕೊಳ್ಳಬೇಕು. ಇಂತಹ ಉಡುಗೆಯಲ್ಲಿ ಹೆಚ್ಚಿನ ನೆರಿಗೆ, ಫ್ರಿಲ್ ಇದ್ದರೆ ಅದು ಚೆನ್ನಾಗಿ ಕಾಣುತ್ತದೆ. ಅನಾರ್ಕಲಿ ವಿನ್ಯಾಸವೂ ಸ್ಟೈಲಿಷ್ ಆಗಿಯೇ ಕಾಣುತ್ತದೆ. ಲಾಂಗ್ ಕುರ್ತಿ ಹೊಲಿಸಿಕೊಂಡರೂ ಅದು ಚೆನ್ನಾಗಿಯೇ ಒಪ್ಪುತ್ತದೆ’ ಎನ್ನುತ್ತಾರೆ ಅವರು.

ಹಳೆಯ ಸೀರೆಗಳಿಗೆ ಹೊಸ ಮೆರುಗು ನೀಡಿದರೆ, ನೂತನ ರೂಪ ಕೊಟ್ಟರೆ ಟ್ರೆಂಡಿಯಾಗಿ ಕಾಣಬಹುದು. ಇಷ್ಟಕ್ಕೂ ಸಿದ್ಧಪಡಿಸಿದ ಉಡುಪನ್ನು ಖುಷಿಯಿಂದ ತೊಟ್ಟುಕೊಳ್ಳುವ ಮನಸ್ಥಿತಿ ನಮ್ಮಲ್ಲಿರಬೇಕು ಅಷ್ಟೆ.

### ಕಫ್ತಾನ್ ಆರಾಮದಾಯಕ

ಸೀರೆಗಳಿಂದ ತಯಾರಿಸಿದ ಕಫ್ತಾನ್ ಇಂದು ಫ್ಯಾಷನ್. ಕಫ್ತಾನ್‌ಗಳನ್ನು ಕಾಟನ್ ಸೀರೆಯಿಂದ ಹೊಲಿಸಿಕೊಂಡರೆ ಬೇಸಿಗೆಗೂ ಸೂಕ್ತ. ಸಡಿಲವಾಗಿದ್ದು, ಆರಾಮದಾಯಕ ಕೂಡ. ಕಾಟನ್ ಸೀರೆಯಲ್ಲಿ ಸೀಕ್ವೆನ್ಸ್ ಪ್ರಿಂಟ್, ಹೂವಿನ ವಿನ್ಯಾಸದ ಪ್ರಿಂಟ್ ಇದ್ದರೆ ಬಹಳ ಸುಂದರವಾಗಿ ಕಾಣುತ್ತದೆ.

ಹಳೆಯ ಸೀರೆಯನ್ನು ಹೊಸ ಉಡುಪಾಗಿ ಪರಿವರ್ತಿಸುವಲ್ಲಿ ಸ್ಕರ್ಟ್ ಈಗ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಇದಕ್ಕೆ ರೇಷ್ಮೆ ಸೀರೆಗಳನ್ನೂ ಬಳಸಬಹುದು, ಕಾಟನ್ ಸೀರೆಗಳೂ ಸೂಕ್ತವೆನಿಸುತ್ತವೆ. ಪಲಾಜೊ ಪ್ಯಾಂಟ್ ಕೂಡ ಮಹಿಳೆಯರು ಇಷ್ಟಪಟ್ಟು ತೊಟ್ಟುಕೊಳ್ಳುತ್ತಾರೆ.